ಅರಿವಿರದ ದಿನಗಳಲ್ಲಿ ಅತಿ ಹತ್ತಿರದಿಂದ ತೆಗೆಯಲು ಮಳೆ ನೀರಲ್ಲಿ ತೆವಳಿ ಹೋಗಿದ್ದೆ. ವಿನಯ ಎಚ್ಚರಿಸಿ ಕಾಲಿಡಿದು ದರದರ ಹಿಂದಕ್ಕೆ ಎಳೆದು, 'ಏನ್ ಸಾರ್ ಇಷ್ಟು ಬೇಗ ತಿಥಿ ಊಟ ಹಾಕಿಸಬೇಕು ಅಂತಿದ್ದೀರ' ಎಂದು ಬುದ್ಧಿ ಹೇಳಿದ್ದ.

ನಮ್ಮ ವಿನಯ ಹುರುಪಿನ ಹುಡುಗ. ಕಾಡಿನ ನರನಾಡಿ ಬಲ್ಲವನು. ತನ್ನ ಬದುಕಿನ ಸಣ್ಣಪುಟ್ಟ ಘಟನೆಗಳನ್ನೂ ಬೆದರಿಕೆ ಹುಟ್ಟಿಸುವಂತೆ ವರ್ಣಿಸಬಲ್ಲವನು. ಆದರೆ ಅದೇ ಕಾಡಿನ ವಿಷಯಕ್ಕೆ ಬಂದರೆ ಅವನು ಧೈರ್ಯಶಾಲಿ. ಸುತ್ತಲಿನ ಬೇಟೆಗಾರರ ಸಾಹಸದಕಥೆ ಕೇಳಿ ಖ್ಯಾತಿ ಹೆಚ್ಚಿಸಿಕೊಂಡವನು. ಇಂತಪ್ಪ ಇವನು ಇವತ್ತು ನಮ್ಮ ಸಹಾಯಕ್ಕಾಗಿ ಇಬ್ಬರು ಸ್ಥಳೀಯ ವ್ಯಕ್ತಿಗಳನ್ನು ಗೊತ್ತು ಮಾಡಿದ್ದ. ಕಾಡಿನ ಇಂಚಿಂಚೂ ಬಲ್ಲ ಇವರಿದ್ದರೆ ತೊಂದರೆ ಇಲ್ಲ ಎಂದು ಸಮಜಾಯಿಷಿ ಕೊಟ್ಟ. ಅವರು ಮೊದಲೇ ಘಮ ಘಮಾಡಿಸುವ ಸ್ಥಳೀಯ ತೀರ್ಥ ಸೆಳೆದು ಸಂತೃಪ್ತಿಯಿಂದ ಬೀಡಿ ಎಳೆಯುತ್ತಾ ದಿಣ್ಣೆ ಮೇಲೆ ಕೂತಿದ್ದರು. ನಾಟಿಕೋಳಿ ಸಾರಿನ ಸುವಾಸನೆ ಅವರನ್ನೂ ಬಂಧನದಲ್ಲಿ ಬಿಗಿದು



ಕೂರಿಸಿತ್ತು. ಎಲ್ಲರ ಕಣ್ಣು, ಮನಸ್ಸುಗಳು, ಹೊಗೆ ಏಳುವ ಹಂಚಿನ ಮನೆಯ ಕಡೆಯ ಒಂದು ಬುಲಾವಿಗೆ ಕಾಯುತ್ತಿದ್ದವು. ನಾನು ಶ್ರೀಕಾಂತ್ ಕ್ಯಾಮೆರಾ ಸಲಕರಣೆಗಳ ಜೋಡಣೆ ಹೊಂದಿಸಿಕೊಳ್ಳುತ್ತಿದ್ದೆವು.

ಅಷ್ಟರಲ್ಲಿ ತೀರ್ಥಹಳ್ಳಿಯಿಂದ ಡಾ. ಪ್ರಭಾಕರ್, ಹೇಮರಾಜು ಬಂದರು. ಅವರೂ ರಾತ್ರಿ ಫೋಟೊ ತಲುಬನ್ನು ಪೂರೈಸಿಕೊಳ್ಳಲು ಸಿದ್ಧವಾಗೇ ಬಂದಿದ್ದರು. 'ಏನಾದರೂ ಸಿಕ್ಕೇ ಸಿಗುತ್ತೆ ಹೋಗೋಣ ಸರ್' ಎಂದು ಡಾ. ಪ್ರಭಾಕರ್ ಹೆಗಲಮೇಲೆ ಕೈ ಹಾಕಿದರು. 'ಹೆಂಗೂ ಜೊತೆಗೆ ಡಾಕ್ಟ್ರೇ ಇದ್ದಾರೆ. ಹೆಚ್ಚು ಕಮ್ಮಿಯಾದ್ರೆ ಉಳ್ಸಿಕೊಳ್ತಾರೆ. ಜಮಾಯಿಸಿ ಬಿಡೋಣ ನಡೀರಿ ಸರ್' ಎಂದು ಶ್ರೀಕಾಂತ್ ರೊಚ್ಚಿಗೆದ್ದರು. ಪ್ರಭಾಕರ್ ಡಾಕ್ಟ್ರು ಜೊತೆಯಿರುವುದು ಕೊಂಚ ನೆಮ್ಮದಿ ಎನಿಸಿತು.

ಕಗ್ಗತ್ತಲಲ್ಲಿ ಪಕ್ಷಿಗಳ ಹುಡುಕುವ ಕೆಲಸದಲ್ಲಿ ವಿನಯನಷ್ಟೇ ಪರಿಣಿತರು ನಮ್ಮ ಜೀವಶಾಸ್ತ್ರದ ಮೇಷ್ಟ್ರು ಹೇಮರಾಜು. ಹಗಲೊತ್ತೇ ಗುರುತಿಸಲು ಸಾಧ್ಯವಾಗದ ಖಗಗಳನ್ನು ರಾತ್ರಿ ಹೊತ್ತು ಖಾತ್ರಿಯಾಗಿ ಕಂಡುಹಿಡಿಯುವ ಇವರೊಬ್ಬ ಚಮತ್ಕಾರಿ ವ್ಯಕ್ತಿ. 'ನನಗೆ ಇರುವುದೊಂದೇ ಪ್ರಾಣ ಅದನ್ನು ಕಳೀಬ್ಯಾಡ್ರಪ್ಪ, ನಿಮ್ಮ ನಂಬಿ ಬರುತ್ತಿದ್ದೇನೆ' ಎಂದು ಬೇಡಿಕೊಂಡೆ. ನನ್ನ ಸೈಜಿಗೆ ಮ್ಯಾಚೇ ಆಗದ ಅಸಡಬಸಡ ಶೂಗಳನ್ನು ವಿನಯ ಎಲ್ಲಿಂದಲೋ ಹುಡುಕಿ ತಂದಿದ್ದ. ಹರಸಾಹಸ ಮಾಡಿ ಅದರಲ್ಲಿ ಕಾಲುಗಳ ಪೋಣಿಸಿಕೊಂಡೆ. ಕ್ಯಾಮೆರಾ ತಗಲಾಕಿಕೊಂಡು ಎಲ್ಲರೂ ಎದ್ದು ನಿಂತರು.

ಬೆಟ್ಟ ಏರಲು ಶುರು ಮಾಡಿದಾಗ ರಾತ್ರಿ ಹತ್ತಾಗಿತ್ತು. ಕಾಡಿನ ಪ್ರತಿ ಶಬ್ದವೂ ರಾತ್ರಿ ಸಮಯದಲ್ಲಿ ಹೆಚ್ಚು ಗಾಬರಿ ಹುಟ್ಟಿಸುತ್ತದೆ. ಯಾವ ದಿಕ್ಕಿನಿಂದ ಯಾವ ಜೀವಿ ನೆಗೆದು ಬರುತ್ತೋ ಎಂಬ ಗುಮಾನಿ ಸದಾ ಮನಸ್ಸಲ್ಲಿ ಹೊಯ್ದಾಡುತ್ತಿರುತ್ತದೆ. ನಾವು ಗುಂಪಾಗಿ ಕಾಡಲ್ಲಿ ಹೋದರೂ ಒಮ್ಮೊಮ್ಮೆ ಏನನ್ನಾದರೂ ಗಮನಿಸುತ್ತ ಒಂಟಿಯಾಗಿ ಹಿಂದೆ ಉಳಿದು ಬಿಡುತ್ತೇವೆ. ಇದಕ್ಕೆಲ್ಲಾ ಅಂಜಬಾರದು. ಇನ್ನೂ ಮುಂಗಡವಾಗಿ ದೆವ್ವ ಭೂತದ ಕಲ್ಪನೆ ತಲೆಯಲ್ಲಿ ತುಂಬಿಕೊಂಡರಂತೂ ಕೆಲಸ ಕೆಟ್ಟಂತೆಯೆ. ಯಾರು ಎಂಥದ್ದೇ ಸಮಾಧಾನ ಹೇಳಿದರೂ ಪುಕ್ಕಲುತನ ಹೋಗುವುದಿಲ್ಲ. ಕತ್ತಲಲ್ಲಿ ಕಾಣುವ ಕಾಡಿನ ಬಿಳಿ ಎಲೆಗಳೂ ಮೋಹಿನಿ ಕಣ್ಣುಗಳಂತೆ ಕಾಣುತ್ತವೆ.